ಎಲ್.ಎ.ಸಿ ನಂಃ 626/2018
ಪಿ.ಡಬ್ಲೂ ನಂಃ 01

<u>ಇಂದು ದಿನಾಂಕಃ 03.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ **ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಎಸ್ ಎನ್ ಜಿ ವಕೀಲರಿಂದಃ**</u>

7. ನನ್ನ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ಪ್ರತಿವಾದಿ ಪರ ಅಧಿಕಾರಿಗಳು ಜಮೀನಿಗೆ ಬಂದು ಜಂಟಿ ಮೋಜಣಿ ಮಾಡಿ ಜಮೀನು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ. ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ 14.07.2011ರಂದು ಅಧಿಸೂಚನೆ

ಹೊರಡಿಸಿರುತ್ತಾರೆ, ನಂತರ ದಿನಾಂಕ 04.05.2016ರಂದು ಐತೀರ್ಪು ಹೊರಡಿಸಿರುತ್ತಾರೆ ಎಂದರೆ ಸರಿ. ನಂತರ ದಿನಾಂಕ 05.01.2017ರಂದು ನನಗೆ ನೋಟಿಸು ಜಾರಿಯಾಗಿರುತ್ತದೆ. ನಂತರ ನಾನು ದಿನಾಂಕ 10.02.2017ರಂದು ಹೆಚ್ಚಿನ ಪರಿಹಾರ ಕೋರಿ ತಕರಾರು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ ಬಗ್ಗೆ ನಾನು ವಿಚಾರಣೆ ಮಾಡಿರುತ್ತೇನೆ. ನಂತರ ನಾನು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯಕ್ಕೆ ದಿನಾಂಕ 29.08.2018ರಂದು ಬಂದಿದ್ದು, ಈ ನಡುವೆ ನನ್ನ ಅರ್ಜಿಯನ್ನು ನ್ಯಾಯಾಲಯಕ್ಕೆ ಸರಿಸಿಕೊಳ್ಳುವಂತೆ ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ.

8. ಐತೀರ್ಪಿನ ಟೇಬಲ ನಂ.1ರಲ್ಲಿ ನಮೂದಿಸಿದ ಜಮೀನುಗಳು ನಮ್ಮ ಜಮೀನಿನ ಅಕ್ಕಪಕ್ಕದ ಜಮೀನುಗಳು ಎಂದರೆ ಸರಿ. ಎಲ್ಲಾ ಜಮೀನುಗಳು ಒಂದೇ ತೆರನಾದ ಜಮೀನುಗಳಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಜಮೀನು ಹೆಚ್ಚಿನ ಫಲವತ್ತತೆ ಹೊಂದಿರುತ್ತದೆ ಎಂದು ನುಡಿಯುತ್ತಾರೆ. ಸ್ವಾಧೀನಪಡಿಸಿಕೊಳ್ಳುವ 3 ವರ್ಷದ ಅವಧಿಯಲ್ಲಿ ಜಮೀನುಗಳು ಮಾರಾಟವಾಗಿರುತ್ತವೆ ಎಂದರೆ ಸರಿ. ನನ್ನ ಜಮೀನಿನ ತರಹದ ಜಮೀನುಗಳ ಮಾರಾಟದ ಅಂಕಿ ಅಂಶದ ಆಧಾರದ ಮೇಲೆ ನನ್ನ ಜಮೀನಿಗೆ ಯೋಗ್ಯ ಪರಿಹಾರ ನಿಗದಿಪಡಿಸಿರುತ್ತಾರೆ ಎಂದರೆ ಸರಿಯಲ್ಲ.

9. ನಿಪಿ-5 ಮತ್ತು ನಿಪಿ-6 ಖರೀದಿ ಕರಾರು ಪತ್ರವು ಸಾಲದ ಭದ್ರತೆಗಾಗಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-5 ಮತ್ತು ನಿಪಿ-6 ಖರೀದಿ ಕರಾರು ಪತ್ರಕ್ಕೆ ಸಂಬಂಧಿಸಿದ ಜಮೀನು ಖರೀದಿಯಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಒಣಬೇಸಾಯದ ಜಮೀನುಗಳಿಗಿಂತ ನೀರಾವರಿ ಜಮೀನುಗಳ ಬೆಲೆ ಹೆಚ್ಚಿಗೆ ಇರುತ್ತದೆ ಎಂದರೆ ಸರಿ. ನಿಪಿ-2 ರಿಂದ 4 ಖರೀದಿ ಪತ್ರಗಳಿಗೆ ಸಂಬಂಧಿಸಿದ ಜಮೀನುಗಳು ಅಥಣಿ ಮುನ್ಸಿಪಾಲಿಟಿ ಹದ್ದಿಗೆ ಒಳಪಟ್ಟಿರುತ್ತವೆ ಎಂದರೆ ಸರಿ. ಅಥಣಿ ಇದು ತಾಲೂಕಾ ಕೇಂದ್ರವಿದ್ದು, ಅಥಣಿ ಮುನ್ಸಿಪಾಲಿಟಿ ವ್ಯಾಪ್ತಿಗೆ ಒಳಪಡುವ ಜಮೀನುಗಳ ಬೆಲೆ ಹೆಚ್ಚಿಗೆ ಇರುತ್ತವೆ ಎಂದರೆ ಸರಿ. ನಿಪಿ-2 ಖರೀದಿ ಪತ್ರಕ್ಕೆ ಸಂಬಂಧಿಸಿದ ಜಮೀನು ನೀರಾವರಿ ಜಮೀನು ಇದ್ದು, ನೀರಾವರಿ ಜಮೀನುಗಳ ಬೆಲೆ ಒಣಬೇಸಾಯ ಜಮೀನುಗಳ ಬೆಲೆಗಿಂತ ಹೆಚ್ಚಿಗೆ ಇರುತ್ತವೆ ಎಂದರೆ ಸರಿ. ನಿಪಿ-2 ರಿಂದ ನಿಪಿ-6ರ ಖರೀದಿ ಪತ್ರ ಮತ್ತು ಖರೀದಿ ಕರಾರು ಪತ್ರಗಳಿಗೆ ಸಂಬಂಧಿಸಿದ ಜಮೀನುಗಳು ಮತ್ತು ನಮ್ಮ

ಜಮೀನು ಒಂದೇ ಗುಣಮಟ್ಟದ ಜಮೀನುಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-7 ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ದಾಖಲಾಗಿರುತ್ತದೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯವರು ನನ್ನ ಜಮೀನಿಗೆ ಸೂಕ್ತ ಪರಿಹಾರ ನಿಗದಿ ಮಾಡಿದ್ದರೂ, ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಸುಭಾಷ ಸಂಕದ)
1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಬೆಳಗಾವಿ.